ಇಲಾಖೆಯ ಕಾರ್ಯದರ್ಶಿಗಳು ಇದನ್ನು ಕೊಡುವುದಕ್ಕೆ ಬರುವುದಿಲ್ಲ ಎಂದು ಬರೆದಿರುವುದನ್ನೂ ತೆಗೆದುಕೊಳ್ಳಿ. ಜಿಲ್ಲಾಧಿಕಾರಿಗಳು ಬರೆದಿರುವುದನ್ನೂ ತೆಗೆದುಕೊಳ್ಳಿ. ತಹಶೀಲ್ದಾರ್‌ರವರು ಬರೆದಿರುವುದನ್ನೂ ತೆಗೆದುಕೊಳ್ಳಿ. ಒತ್ತುವರಿ ಮಾಡಿರುವುದಕ್ಕೆ ಸರ್ವೇಯರ್ ಮಹಜರು ಇದೆ, ಅದನ್ನೂ ಬೇಕಾದರೂ ಕೊಡುತ್ತೇವೆ. ಸರ್ವೇಯರ್, ತಹಶೀಲ್ದಾರ್, ರೆವಿನ್ಯೂ ಇನ್ಸ್‌ಪೆಕ್ಟರ್ ಹೀಗೆ ಎಲ್ಲರೂ ಹೇಳಿದ್ದಾರೆ. ಒಂದು ಕಡೆ K.P.C.L. ಜಮೀನು ಒತ್ತುವರಿಯಾಗಿದೆ, ಇನ್ನೊಂದು ಕಡೆ ಫಾರೆಸ್ಟ್ ಲ್ಯಾಂಡ್ ಒತ್ತುವರಿಯಾಗಿದೆ. ಅಲ್ಲಿ ಗಿಡಮರಗಳನ್ನೆಲ್ಲಾ ತೆಗೆದು ಹಾಕಿದ್ದಾರೆ. ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದೆ. ಇಲ್ಲಿ ಹೇಳುತ್ತಾರೆ ನೋಡಿ, "ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ವಿಚಾರಣೆಗೆ ಬಾಕಿ ಇರುವುದರಿಂದ ಸರ್ಕಾರಿ ವಕೀಲರಿಂದ ಕಾನೂನು ಸಲಹೆ ಪಡೆಯುವುದು ಸೂಕ್ತವೆಂದು Advocate General ರವರು ಹೇಳಿದರು ಎಂದು ಹೇಳುತ್ತಾರೆ. ಹೈಕೋರ್ಟ್‌ನಲ್ಲಿ ಕೇಸ್ ಇದ್ದುದನ್ನು ನೀವು ತೆಗೆದುಕೊಂಡು ಅದಕ್ಕೆ ಮಂಜೂರಾತಿ ಕೊಡುತ್ತೀರಿ ಎಂದರೆ ಅದಕ್ಕೆ ಅರ್ಥವೇನು ಸ್ವಾಮಿ?

ಡಾ: ವಿ.ಎಸ್.ಆಚಾರ್ಯ : ಕೇಸು ಕೋರ್ಟಿಗೆ ಬಂದಿರುವುದು ಈಗ.

ಶ್ರೀ ಹೆಚ್.ಡಿ.ರೇವಣ್ಣ : ನಿಮ್ಮ ಹೇಳಿಕೆಯಲ್ಲಿ ಏನಿದೆ ಎಂದು ದಯಮಾಡಿ ಓದಿ. ಆವತ್ತು ನೀವು ಮಂಜೂರಾತಿ ಮಾಡಿ ದೇವಸ್ಥಾನವನ್ನು ಕೊಟ್ಟಿರಲ್ಲ, ಆವತ್ತು ಕೋರ್ಟಿನಲ್ಲಿ ಕೇಸ್ ಇತ್ತು ಎಂದು ನೀವೇ ಹೇಳಿಕೆ ಕೊಟ್ಟಿದ್ದೀರಿ. ನಿಮಗೆ ಸರಿಯಾಗಿ information ಕೊಡುತ್ತಿಲ್ಲ. ನಿಮಗೆ ಕಡತ ಬೇಕಾದರೂ ಕೂಡಲೇ ಕಳುಹಿಸಿಕೊಡುತ್ತೇನೆ. ನೀವು ಗೌರವವಾಗಿ ಆ ದೇವಸ್ಥಾನವನ್ನು ಸರ್ಕಾರಕ್ಕೆ ವಾಪಸ್ಸು ತೆಗೆದುಕೊಳ್ಳಬೇಕು. 3,425 ಸರ್ಕಾರಿ ದೇವಸ್ಥಾನಗಳಿವೆ. ಅದರಲ್ಲಿ ಇದನ್ನೂ ವಾಪಸ್ಸು ತೆಗೆದುಕೊಳ್ಳಬೇಕು. ಆ ದೇವಸ್ಥಾನ 1 ರಿಂದ 92 ರಲ್ಲಿತ್ತು. ಮುಜರಾಯಿ ಸಚಿವರಾದ ನೀವು ಪ್ರಾಮಾಣಿಕರು. ನಿಮಗೆ ದೇವರು ಒಳ್ಳೆಯದು ಮಾಡಲಿ. ನಿಮಗೆ ಮುಜರಾಯಿ ಖಾತೆ ಖಾಯಂ ಆಗಿರಬೇಕು. ಅದಕ್ಕೋಸ್ಕರ ಕೂಡಲೇ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು. ಯಾರ್ಯಾರು ಒತ್ತುವರಿ ಮಾಡಿದ್ದಾರೋ ಅದನ್ನೆಲ್ಲ ತೆರವು ಮಾಡಬೇಕು. ಅವರ ಉತ್ತರ ಸರಿಯಿಲ್ಲ. ಆದ್ದರಿಂದ ನಾವೆಲ್ಲದ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಜೆ.ಡಿ.(ಎಸ್) ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)